ಓ.ಎಸ್ಃ 403/2022

ಪಿ.ಡಬ್ಲ್ಯೂಃ 01

**<u>ದಿನಾಂಕಃ 28.03.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಮಾಡಲಾಯಿತು</u>**

**<u>ಮುಂದುವರೆದ ಮುಖ್ಯವಿಚಾರಣೆ ವಾದಿಯ ಪರ ಶ್ರೀ. ಡಿ.ಎಸ್.ಪಿ. ವಕೀಲರಿಂದಃ-</u>**

ನಾನು ನ್ಯಾಯಾಲಯಕ್ಕೆ ಕೆಲವು ದಾಖಲೆಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ಈ ಕೆಳಗಿನಂತೆ ನಿಶಾನೆಗಳಾಗಿ ಗುರುತಿಸಲಾಗಿದೆ.

1. ದೃಡಿಕೃತ ಕ್ರಯ ಪತ್ರವನ್ನು ಹಾಜರುಪಡಿಸಿದ್ದು ಅದನ್ನು ನಿಪಿ-7 ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲು ಪ್ರತಿವಾದಿಗಳ ಪರ ಶ್ರೀ.ಸಿ.ಆರ್.ಎಸ್. ವಕೀಲರಿಂದಃ</u>**

ನಾನು 5 ನೇ ತರಗತಿಯವರೆಗೆ ವಿಧ್ಯಾಬ್ಯಾಸ ಮಾಡಿರುತ್ತೇನೆ. ನನಗೆ ಕನ್ನಡ ಓದಲು ಮತ್ತು ಬರೆಯಲು ಸ್ವಲ್ಪ ಮಟ್ಟಿಗೆ ಬರುತ್ತದೆ. ನನ್ನ ಗಂಡನ ಹೆಸರು ಮಹಾದೇವ. ನಮಗೆ ಇಬ್ಬರೂ ಗಂಡು ಮಕ್ಕಳು ಇರುತ್ತಾರೆ. ನಾವು ಎಲ್ಲರೂ ಸೇರಿಯೆ ರೋಣಿಹಾಳ ಗ್ರಾಮದಲ್ಲಿಯೆ ವಾಸವಾಗಿರುತ್ತೇವೆ. ನಾವು ಏನೆ ವ್ಯವಹಾರ ಮಾಡಿದರು ಇಬ್ಬರೂ ಕೂಡಿಯೆ ಮಾಡಿರುತ್ತೇವೆ. ನನ್ನ ಹೆಸರಿನಲ್ಲಿ ರೋಣಿಹಾಳ ಗ್ರಾಮದಲ್ಲಿ ಜಮೀನು ಇರುವುದಿಲ್ಲ ಆದರೆ ಮನೆ ಇರುತ್ತದೆ. ಮನೆ ವಿಪಿ.ಸಿ.ನಂ.775 ಇರತ್ತದೆ. ಸದರಿ ಮನೆಯ ಉದ್ದ-ಅಳತೆ ನನಗೆ ಗೊತ್ತಿಲ್ಲ.

2. ನನ್ನ ದಾವೆ ಸಲ್ಲಿಸಲು ನನ್ನ ಗಂಡನು ಮಾಹಿತಿ ನೀಡಿರುತ್ತಾರೆ. ದಾವೆಯ ಸಲ್ಲಿಲು ಸಲ್ಲಿಸಿದ ಮಾಹಿತಿ ನನಗೆ ಇರುತ್ತದೆ. ಪ್ಲಾಟಿನ ಉದ್ದ-ಅಳತೆ ನಮೂದಿಸಿದ್ದು ಅದರ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ಸದರಿ ಪ್ಲಾಟು ಮೊದಲು ಸಿತೋಳಿರವರ ಹೆಸರಿನಲ್ಲಿದ್ದು ನಂತರ ನಾವು ಅದನ್ನು ಖರೀದಿ ಪಡೆದುಕೊಂಡಿರುತ್ತೇವೆ. ಸದರಿ ಪ್ಲಾಟನ್ನು ನಾವು 2018 ರಲ್ಲಿ ಖರೀದಿ ಪಡೆದುಕೊಂಡಿರುತ್ತೇವೆ. ಪ್ಲಾಟನ್ನು ನಾವು ರೂ. 5,50,000/-ಪಡೆದುಕೊಂಡಿರುತ್ತೇವೆ. ಸದರಿ ಆಸ್ತಿಯನ್ನು ನನ್ನ ತವರು ಮನೆಯ ಸಹಾಯದಿಂದ ಖರೀದಿ ಪಡೆದುಕೊಂಡಿರುತ್ತೇವೆ. ಸದರಿ ಹಣವನ್ನು ನನ್ನ ಗಂಡನು ನನ್ನ ತವರು ಮನೆಯಿಂದ ಪಡೆದುಕೊಂಡು ಬಂದಿರುತ್ತಾರೆ. ನಂತರ ಸಂಘದಿಂದ ಸಾಲ ಮಾಡಿರುತ್ತೇವೆ. ಬೀರಲಿಂಗೇಶ್ವರ ಸಂಘದಿಂದ ರೂ.3,50,000/- ಪಡೆದುಕೊಂಡಿರುತ್ತೇವೆ. ಸದರಿ ಮನೆಯ ಮೇಲೆ ಬೋಜಾ ಇರುತ್ತದೆ ಎಂದು ಸಾಕ್ಷಿ ನುಡಿಯುತ್ತಾರೆ.

3. ಯಾವ ದಿನಾಂಕದಂದು ಮನೆಯ ಮೇಲೆ ಸಾಲವನ್ನು ಪಡೆದುಕೊಂಡಿರುತ್ತೇನೆ ಎಂದು ನನಗೆ ಹೇಳಲು ಬರುವುದಿಲ್ಲ. ನಾವು ರೂ.5,50,000/- ಲಕ್ಷಕ್ಕೆ ಖಾಲಿ ಜಾಗವನ್ನು ಪಡೆದುಕೊಂಡಿರುತ್ತೇವೆ. ಸದರಿ ಜಾಗದಲ್ಲಿ ಮನೆಯನ್ನು ಕಟ್ಟಾಲಾಗಿರುತ್ತದೆ. ಮನೆಯನ್ನು ನಾವು ಯಾವ ವರ್ಷದಲ್ಲಿ ಕಟ್ಟಿರುತ್ತೇವೆ ಎಂದು ನನ್ನ ಗಂಡನಿಗೆ ಗೊತ್ತಿರುತ್ತದೆ ಎಂದು ಸಾಕ್ಷ ನುಡಿಯುತ್ತಾರೆ. ಮನೆಯನ್ನು ಕಟ್ಟಲು ಎಷ್ಟು ಖರ್ಚು ಆಗಿರುತ್ತದೆ ಎಂದು ನನಗೆ ಗೊತ್ತಿಲ್ಲ, ನನ್ನ ಗಂಡನಿಗೆ ಗೊತ್ತಿರುತ್ತದೆ. ನನ್ನ ಗಂಡ ಎಲ್ಲಿ ಹಣವನ್ನು ತಂದಿರುತ್ತಾನೆ ಎಂದರೆ ಸಾಕ್ಷಿಯು ಬೀರಲಿಂಗೇಶ್ವರ ಸಂಘದಿಂದ ಸಾಲವನ್ನು ಮಾಡಿರುತ್ತಾನೆ ಎಂದು ಸಾಕ್ಷ ನುಡಿಯುತ್ತಾರೆ. ಮನೆ ಕಟ್ಟಿದ ನಂತರ ಸಾಲವನ್ನು ಪಡೆದುಕೊಂಡಿರುತ್ತಾನೆ.

4. ಮನೆ ಕಟ್ಟುವ ಸಮಯದಲ್ಲಿ ನನ್ನ ತವರು ಮನೆಯಿಂದ ಹಣವನ್ನು ತಂದಿರುತ್ತೇನೆ. ನಾನು ನನ್ನ ತವರು ಮನೆಯಿಂದ ಎಷ್ಟು ಹಣವನ್ನು ಪಡೆದುಕೊಂಡು ಬಂದಿರುತ್ತೇನೆ ಎಂದು ತೋರಿಸಲು ದಾಖಲಾತಿಗಳು ಇರುವುದಿಲ್ಲ. ಬೀರಲಿಂಗೇಶ್ವರ ಸಂಘ, ಕೃಷಿ ಪತ್ತಿನ ಸಹಕಾರಿ ಸಂಘದಲ್ಲಿ ಸಾಲ, ಧರ್ಮಸ್ಥಳ ಮಹಿಳಾ ಸ್ವಸಹಾಯ ಸಂಘದಿಂದ ಸಾಲ ಪಡೆದುಕೊಂಡಿರುತ್ತೇವೆ ಇದನ್ನು ಬಿಟ್ಟು ಬೇರೆ ಯಾವ ಸಂಘದಲ್ಲಿ ಸಾಲ ಇರುವುದಿಲ್ಲ. ರಾಜೀವಗಾಂಧಿ ಗ್ರಾಮೀಣ ವಸತಿ ನಿಲಯ ನಿಗಮ ರೂ.1,30,000/- ಸಾಲವನ್ನು ಪಡೆದುಕೊಂಡಿರುತ್ತೇನೆ. ಸದರಿ ಹಣ ಸರ್ಕಾರದಿಂದ ಮಂಜೂರು ಆದ ಹಣವಾಗಿರುತ್ತದೆ. ಸರ್ಕಾರದ ಸಹಾಯ ಧನ ಅಂತಾ ಪಡೆದುಕೊಂಡಿರುತ್ತೇವೆ.

5. ರಾಜೀವಗಾಂಧಿ ಗ್ರಾಮೀಣ ವಸತಿ ನಿಲಯ ನಿಗಮದಿಂದ ಸಾಲ ಪಡೆದುಕೊಂಡಿರುತ್ತೇವೆ ಎಂದು ನಮೂದಿಸಿರುತ್ತೇವೆ ಎಂದರೆ ಸಾಕ್ಷಿಯು ತಪ್ಪಾಗಿ ನಮೂದಿಸಲಾಗಿರುತ್ತದೆ ಎಂದು ನುಡಿಯುತ್ತಾರೆ. ಸದರಿ ಹಣ ಪಡೆದುಕೊಳ್ಳುವಾಗ ದಾಖಲಾತಿಯನ್ನು ಅಡಮಾನವಾಗಿ ನೀಡಲಾಗಿತ್ತು ನಮೂದಿಸಲಾಗಿತ್ತು ಎಂದರೆ ಸಾಕ್ಷಿಯು ತಪ್ಪಾಗಿ ನಮೂದಿಸಲಾಗಿರುತ್ತದೆ ಎಂದು ನುಡಿಯುತ್ತಾರೆ. ದಾವಾ ಆಸ್ತಿಯನ್ನು ಹಸ್ತಾಂತರ ಮಾಡಲು ಅಥವಾ ಮಾರಾಟ ಮಾಡಲು ಬರುವುದಿಲ್ಲ ಎಂದು ನಮೂದಿಸಿದ್ದು ಸರಿ ಇರುತ್ತದೆ. ನನ್ನ ಮನೆಯ ದಾಖಲಾತಿಯನ್ನು ಬೀರಲಿಂಗೇಶ್ವರ ಸಂಘದಲ್ಲಿ ಇಟ್ಟಿರುತ್ತೇನೆ. ನಾನು ರಾಜೀವಗಾಂಧಿ ಗ್ರಾಮೀಣ ವಸತಿ ನಿಲಯ ನಿಗಮದಲ್ಲಿ ದಾಖಲಾತಿಯನ್ನು

ಅಡಮಾನವಾಗಿ ಇಟ್ಟಿಲ್ಲ ಮತ್ತು ಸಾಲವನ್ನು ಪಡೆದುಕೊಂಡಿಲ್ಲ ಆದರೆ ಸಹಾಯ ಧನವನ್ನು ಪಡೆದುಕೊಂಡಿರುತ್ತೇನೆ ಎಂದು ನುಡಿಯುತ್ತಾರೆ.

6. ನನ್ನ ವಾದ ಪತ್ರದಲ್ಲಿ ನಾನು ಬೀರಲಿಂಗೇಶ್ವರದಲ್ಲಿ, ಧರ್ಮಸ್ಥಳ ಮಹಿಳಾ ಸ್ವಸಹಾಯ ಸಂಘ, ಕೃಷಿ ಪತ್ತಿನ ಸಹಕಾರಿ ಸಂಘದಲ್ಲಿ ಸಾಲವನ್ನು ಪಡೆದುಕೊಂಡಿರುತ್ತೇನೆ ಎಂದು ನಾನು ಹೇಳಿರುತ್ತೇನೆ. ನನ್ನ ವಾದ ಪತ್ರದಲ್ಲಿ ಸದರಿ ವಿಷಯ ಬರೆಯಲಾಗಿರುತ್ತದೆ. ನಾನು ಬೀರಲಿಂಗೇಶ್ವರ ಸಂಘದ ದಾಖಲಾತಿಯನ್ನು ನೀಡಿರುತ್ತೇನೆ. ಧರ್ಮಸ್ಥಳ ಮಹಿಳಾ ಸ್ವಸಹಾಯ ಸಂಘ, ಕೃಷಿ ಪತ್ತಿನ ಸಹಕಾರಿ ಸಂಘದಲ್ಲಿ ಸಾಲವನ್ನು ಪಡೆದುಕೊಂಡಿರುತ್ತೇನೆ ಎಂದು ತೋರಿಸಲು ದಾಖಲಾತಿಯನ್ನು ಹಾಜರು ಪಡಿಸಿರುವುದಿಲ್ಲ. ಸದರಿ ಸಾಲ ನನ್ನ ಹೆಸರಿನಲ್ಲಿ ಇರುತ್ತದೆ. ನಾನು ಧರ್ಮಸ್ಥಳ ಸ್ವಸಹಾಯ ಸಂಘದ ಸಾಲವನ್ನು ತುಂಬಿರುತ್ತೇನೆ. ಕೃಷಿ ಪತ್ತಿನ ಸ್ವಸಹಾಯ ಸಂಘದ ಸಾಲ ಇರುತ್ತದೆ. ನನಗೆ ಕಛೇರಿಗಳ ಬಗ್ಗೆ ಗೊತ್ತಾಗುತ್ತದೆ. ನನಗೆ ಸಬ್ ಕಛೇರಿಗೆ ಹೋದರೆ ಯಾವ ಕೆಲಸಗಳು ಆಗುತ್ತವೆ ಎಂದು ಗೊತ್ತಾಗುವುದಿಲ್ಲ. ಖರೀದಿ ನೋಂದಣಿ ಆಗಬೇಕಾದರೆ ನೋಂದಣಿ ಕಛೇರಿಯಲ್ಲಿ ಆಗುತ್ತದೆಯೋ ಅಥವಾ ತಹಶಿಲ್ದಾರ ಕಛೇರಿಯಲ್ಲಿ ಆಗುತ್ತದೇಯೋ ಎಂಬ ಪ್ರಶ್ನೆಗೆ ಸಾಕ್ಷಿಯು ನನ್ನ ಗಂಡ ಎಲ್ಲಿ ಕರೆದುಕೊಂಡು ಹೋಗುತ್ತಾರೋ ಅಲ್ಲಿ ಗೊತ್ತಾಗುತ್ತದೆ ಎಂದು ನುಡಿಯುತ್ತಾರೆ. ನನ್ನ ಗಂಡ ಎಲ್ಲಿ ಸಹಿ ಮಾಡಲು ಹೇಳುತ್ತಾರೋ ಅಲ್ಲಿಯೆ ನಾನು ಸಹಿ ಮಾಡಿರುತ್ತೇನೆ. ನಾನು ಸಹಿ ಮಾಡಬೇಕಾದರೆ ನನ್ನ ಗಂಡನಿಗೆ ಯಾವ ಕಾಗದ ಮೇಲೆ ಸಹಿ ಪಡೆದುಕೊಳ್ಳುತ್ತಾರೆ ಎಂದು ಕೇಳುತ್ತೇನೆ. ನನಗೆ ಸರಿ ಅನಿಸಿದರೇ ಮಾತ್ರ ಕಾಗದ ಪತ್ರಕ್ಕೆ ಸಹಿ ಮಾಡುತ್ತೇನೆ ಎಂದರೆ ಸರಿ.

7. ನನ್ನ ಗಂಡ ಪ್ಲಾಟ ತೆಗೆದುಕೊಳ್ಳುವಾಗ ಒಂದು ಬಾರಿ ಸಹಿಯನ್ನು ಪಡೆದುಕೊಂಡಿರುತ್ತಾರೆ. ನನಗೆ ಬೇರೆಯವರು ಬಂದು ಸಹಿ ಮಾಡಲು ಹೇಳಿದರು ಸಹಿ ಮಾಡುತ್ತೇನೆ. ಒಂದು ಬಾರಿ ಮಾತ್ರ ಸಹಿ ಮಾಡಿರುತ್ತೇನೆ. ಯಾವ ಲಾಭಕ್ಕಾಗಿ ಬೇರೆಯವರು ಸಹಿ ಮಾಡಲು ಹೇಳಿದ್ದರಿಂದ ಸಹಿ ಮಾಡುತ್ತೀರಿ ಎಂಬ ಪ್ರಶ್ನೆಗೆ ನಂಬಿಕೆಯಿಂದ ಸಹಿ ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ನಾನು ನಂಬಿಕೆಯಿಂದ ಖರೀದಿ ಮಾಡುವ ಸ್ಥಳದಲ್ಲಿ ಸಹಿ ಮಾಡಿರುತ್ತೇನೆ. ನನಗೆ ನೋಂದಣಿ ಕಛೇರಿಯಲ್ಲಿ ಹೋದ ತಕ್ಷಣ ಸಹಿ ಪಡೆದುಕೊಂಡಿರುತ್ತಾರೆ. ಸದರಿ ಕಛೇರಿಯಲ್ಲಿ ಅಧಿಕಾರಿಗಳು ಇರುತ್ತಾರೆ ಎಂದರೆ ಸರಿ. ಸದರಿ ಅಧಿಕಾರಿಗಳು ನನಗೆ ಯಾವುದೇ ಮಾಹಿತಿ ಹೇಳಿರುವುದಿಲ್ಲ. ಸದರಿ ಅಧಿಕಾರಿಗಳ ವಿರುದ್ಧ

ಯಾವುದೆ ದೂರನ್ನು ಸಲ್ಲಿಸಿರುವುದಿಲ್ಲ. ನಾನು ಸದರಿ ಅಧಿಕಾರಿಗಳಿಗೆ ನಮ್ಮ ವಕೀಲರ ಮೂಲಕ ಯಾವುದೇ ಕಾನೂನು ಬದ್ದ ನೋಟಿಸು ನೀಡಿರುವುದಿಲ್ಲ. ಅಧಿಕಾರಿಗಳ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ ಆದ ಕಾರಣ ಪ್ರತಿವಾದಿ ವಿರುದ್ದ ಮಾತ್ರ ದಾವೆಯನ್ನು ಸಲ್ಲಿಸಿರುತ್ತೇನೆ ಎಂದು ನುಡಿಯುತ್ತಾರೆ. ಅಧಿಕಾರಿಗಳ ಮೇಲೆ ಕ್ರಮ ಕೈಗೊಳಲು ಮಾಹಿತಿ ನನಗೆ ಇಲ್ಲ ಎಂದು ನುಡಿಯುತ್ತಾರೆ.

**ಪ್ರತಿವಾದಿಯ ಪರ ವಕೀಲರು ಮುಂದುವರೆದ ಪಾಟಿ ಸವಾಲಿಗೆ ಕಾಲಾವಕಾಶ ಕೋರಿದ್ದರಿಂದ ಮುಂದುಡಲಾಯಿತು.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸರಿ ಅದೆ.**

**(ಶ್ರೀ ಅಮಿತ್ ಘಟ್ಟಿ)**
**ದಿವಾಣಿ ನ್ಯಾಯಾಧೀಶರು ಮತ್ತು**
**ನ್ಯಾಯಿಕ ದಂಡಾಧಿಕಾರಿಗಳು**
**ಬಸವನ ಬಾಗೇವಾಡಿ.**